

ಗುಡಿಸಿದಂತೆ ರಾಘವನ ಮಂಡೆಬಿಸಿಯನ್ನು ಮಾತಿನಲ್ಲಿಯೇ ಗುಡಿಸಿ ಹಾಕಿದಳು.

ರಾಘವನು ಹೆಂಡತಿಯ ಮಾತಿಗೆ ಚುರುಕಾದ. ಮೂಲೆ ಬಿಟ್ಟು ಎದ್ದು ನಿಂತವನು ಹೆಗಲಿಗೆ ಬೈರಾಸನ್ನು ಹಾಕಿಕೊಂಡು, 'ತೇಜಣ್ಣನಿಗೆ ನಿನ್ನೆನೆ ಫೋನ್ ಮಾಡಿದ್ದೇನೆ. ಅವರ ಅಣ್ಣತಮ್ಮಂದಿರಿಗೆ ಕೊಡದ ಜಾಗೆಯನ್ನು ಇನ್ನು ನಮಗೆ ಕೊಡ್ತಾರಾ? ನನಗೆ ಅದರ ಮೇಲೆ ಮೋಹವಿಲ್ಲ'. ನಕ್ಕು ಪ್ರಶ್ನಿಸದಿದ್ದರೂ ಅವನ ಮಾತಿನಲ್ಲಿ ವ್ಯಂಗ್ಯದ ಎಳೆಯೊಂದು ಇರುವುದು ಸರಳಾಳಿಗೆ ಗೋಚರಿಸಿತು.

'ನೀವು ಹೇಳ್ತೀರಿ, ಅವರು ಕೋಟಿಗಟ್ಟಲೆ ಇರುವವರೂಂತ. ಇಂತಹ ಜುಜುಬಿ ಆಸ್ತಿಗೆ ಆಸೆಪಡ್ತಾರಾ? ನೀವು ಕೇಳಿ ನೋಡುವುದರಲ್ಲಿ ತಪ್ಪೇನು? ಎಷ್ಟೆಂದರೂ ನಿಮ್ಮ ದೊಡ್ಡಪ್ಪನ ಸಂತಾನವಲ್ಲವೇ?'

'ಮನುಷ್ಯನಿಗೆ ಎಷ್ಟಿದ್ದರೂ ಸಾಕಾಗ್ತದನಾ? ಕೋಟಿಗಟ್ಟಲೆ ಇದ್ದವನಾದ್ರೂ ಹೆಣ್ಣು ಹೊನ್ನು ಮಣ್ಣಿನ ಆಸೆ ಮುಗಿತದಾ? ಹೌದು, ತೇಜಣ್ಣನಿಗೆ ಬೊಂಬಾಯಿಯಲ್ಲಿ ಒಳ್ಳೆಯ ಕೆಲಸ ಉಂಟು. ಐಟಿ ಕಂಪನಿಯಲ್ಲಿ ಕೆಲಸ ಮಾಡುವುದಂತೆ. ಸಂಬಳ ಕಡಿಮೆ ಸಿಗ್ತದಾ? ಆದರೂ ಅವರ ಹಕ್ಕಿನ ಆಸ್ತಿಯನ್ನು ಬೇರೆಯವರಿಗೆ ಕೊಡಲಿಕ್ಕುಂಟಾ?' ನಿರಾಸೆಯಿಂದ ಹೇಳಿದ ರಾಘವ.

'ಅಷ್ಟು ದುಡ್ಡು ಇರುವವರಾದರೆ ಅವರಿಗೆ ಈ ಆಸ್ತಿಯ ಮೇಲೆ ಆಸೆ ಇರ್ಲಿಕ್ಕೆ ಇಲ್ಲ ಅಲ್ವಾ? ನೀವು ಕೇಳಿದರೆ ಕೊಟ್ಟಾರು. ಹಕ್ಕು ಎಂತದು ಕರ್ಮ. ನಿಮ್ಮ ಅಪ್ಪನಾಗಲಿ ಅವರ ತಮ್ಮಂದಿರಾಗಲಿ ಆ ಆಸ್ತಿಯಲ್ಲಿ ಪಾಲು ಕೇಳಿದ್ದಾರಾ? ಈಗ ಅವರಿಗೆ ಕಂಪನಿಯಿಂದ ಬೇಕಾದಷ್ಟು ಹಣ ಸಿಗುವಾಗ ಈ ಹಳ್ಳಿಯ ಆಸ್ತಿ ಅವರಿಗೆ ಎಂತಕ್ಕೆ? ಅವರು ಮನಸ್ಸು ಮಾಡಿ ನಿಮಗೆ ಕೊಟ್ಟರೆ ಹಿರಿಯರ ಪ್ರಸಾದಾಂತ ನಾವು ನೋಡಿಕೊಳ್ಳಬಹುದು'.

'ಅದೆಲ್ಲಾ ಆಮೇಲೆ ನೋಡುವಾ. ಅವರು ನಾಳೆ ಬರುತ್ತೇನೇಂತ ಹೇಳಿದ್ದಾರೆ. ಹನ್ನೊಂದೂವರೆ ಫ್ಲೈಟ್‌ನಲ್ಲಿ ಬಂದಾರು. ಮೂಸನ ಕಾರು ಕೂಡ ಕಳ್ಸಿಕ್ಕೆ ಹೇಳಿದ್ದಾರೆ. ಬಂದವರು ಏನಾದರೊಂದು ನಿರ್ಧಾರ ತೆಗೆದುಕೊಳ್ಳದೆ ಇರುತ್ತಾರಾ?'

'ಎಂತಹ ನಿರ್ಧಾರ ಬೇಕಾದರೂ ತೆಗೆದುಕೊಳ್ಳಲಿ. ನೀವು ಮಾತ್ರ ಅವರನ್ನು ಸುಮ್ಮನೆ ಬಿಡುವುದು ಬೇಡ. ತೆಂಗಿನಕಾಯಿ ಸಿಪ್ಪೆ ಸುಲಿದ ಹಾಗೆ ಸುಲಿಬೇಕು. ನಿಮ್ಮ ಅಪ್ಪನ ಹತ್ತಿರ ಅವರ ಅಪ್ಪ ಪೀಂಕಿಸಿದ್ದನ್ನೆಲ್ಲಾ ನೀವು ಇವರ ಹತ್ತಿರ ಪೀಂಕಿಸಬೇಕು. ಇಲ್ಲದಿದ್ದರೆ ನಮಗೆ ಬದುಕಲಿಕ್ಕೆ ಕಷ್ಟ ಉಂಟು'. ಸರಳಾ ವಯಸ್ಸಿನಲ್ಲಿ ಸಣ್ಣವಳಾದರೂ ಅನುಭವದಲ್ಲಿ ಹಿರಿಯಳು. ಅದಕ್ಕೆ ಮೇಳಾಮೇಳಿ ಕೂಡಿಬಂದು ರಾಘವನ ಕುತ್ತಿಗೆಗೆ ಗಂಟು ಬಿದ್ದದ್ದು.

'ನಾನು ಪೀಂಕಿಸದೆ ಕುಳಿತುಕೊಳ್ಳುವುದಿಲ್ಲ. ಮೊನ್ನೆ ಪಾಲಿನ ಹಣದಲ್ಲಿ ಧಾನಧರ್ಮ ಮಾಡುವಾಗ ಬಿಟ್ಟಿದ್ದೇನಾ? ನನ್ನ ಕೈಯಲ್ಲಿ ಏನೂ ಇಲ್ಲಾಂತ ಹೇಳಿ ಗೋಳೋಂತ ಅತ್ತು ಬಿಟ್ಟೆ. ತೇಜಣ್ಣ ಬಿಡ್ತಾರಾ... ಎಲ್ಲರನ್ನೂ ಕರೆದು ಹೇಳಿದ್ರು, ರಾಘವನತ್ರ ದುಡ್ಡು ಇಲ್ಲ. ಯಾರೂ ಅವನತ್ರ ಯಾವ ವಿಷಯಕ್ಕೂ ಹಣ ಕೇಳಬಾರದು ಅಂತ. ಮೊನ್ನೆ ಆದ ಧಾನಧರ್ಮದ ಖರ್ಚಿಗೆ ಅವನ ದುಡ್ಡು ಮೂವತ್ತು ಸಾವಿರ ರೂಪಾಯಿ ನಾನು ಹಾಕ್ತೇನೆಂತ. ಆಯ್ತಲ್ಲ ಮೂವತ್ತು ಸಾವಿರ ಹಾಗೆ ಬಂತು. ಇನ್ನು ನೋಡ್ತಾ ಇರು ಈ ಜಾಗೆಯ ವಿಷಯಕ್ಕೆ ನಾನೇ ಓಡಾಡ್ಬೇಕು. ಅವರ ಅಣ್ಣ ತಮ್ಮಂದಿರನ್ನು ಹೇಗೂ ದೂರ ಮಾಡಿದ್ದಾರೆ. ಅವರು ಯಾರನ್ನೂ ತೇಜಣ್ಣ ತಲೆ ಹಾಕ್ಲಿಕ್ಕೆ ಬಿಡ್ಲಿಲ್ಲ, ಬಿಡುವುದೂ ಇಲ್ಲ. ಮತ್ತೆ ಮುಂದೆ ಹೋಗುವುದು ಯಾರೂ? ನಾನೇ ಹೋಗಬೇಕಲ್ಲ' ಎಂದು ಆಗ ಅಷ್ಟಾಯಿತು ಇಷ್ಟಾಯಿತು ಹೇಳಿ ತೆಗೆದುಕೊಳ್ಳುವ ಸರಳಾಳಿಗೆ ಸರಳವಾಗಿ ಹೇಳಿ ಒಪ್ಪಿಸಿದ. ಸರಳ ಬಡಪೆಟ್ಟಿಗೆ ಜಗ್ಗುವ ಹೆಣ್ಣಲ್ಲ. ಬದುಕು ಏನೂ ಎನ್ನುವುದು ಅವಳಿಗೆ ಕಲಿಸಿಕೊಟ್ಟಿದೆ.

ರಾಘವನ ಮಾತು ಕೇಳಿ ಸರಳಾಳಿಗೆ ಸಮಾಧಾನವಾದರೂ ತನ್ನ ಗಂಡನ ಚಾಳಿಗಳು ತಿಳಿಯದ್ದೇನಲ್ಲ. ಎಷ್ಟು ಬಂದರೂ ಅಂಗೈ ತೂತೇ.

'ಅವರು ಊರಿಗೆ ಬಂದಾಗ ನೀವು ಎಷ್ಟು ಬೇಕೋ ಅಷ್ಟೇ ಇರಿ. ದೇವರೇಂತ ಹೇಳಿ ನೀವು ತೇಜಣ್ಣನ ಕಾಲಿಗೆ ಬಿದ್ದು ಅಳುವುದು ಬೇಡ. ನೀವೇನು ಧರ್ಮಾರ್ಥ ಅವರ ಸೇವೆ ಮಾಡುವುದಲ್ಲ. ಮುಳ್ಳಿನಿಂದ ಮುಳ್ಳನ್ನು ತೆಗೆಯಬೇಕೂಂತ ತಿಳಿದಿರಲಿ'.

'ಅವರು ಹಿರಿಯರಲ್ವಾ? ಅವರ ಕಾಲು ಹಿಡಿಯುವುದರಲ್ಲಿ ಏನು ತಪ್ಪು? ಕಾಲು ಹಿಡಿಯದಿದ್ದರೆ ಕೆಲಸ ಆಗುವುದಿಲ್ಲ. ನೀನು ನನಗೆ ಅದನ್ನೆಲ್ಲಾ ಬೋಧಿಸುವುದು ಬೇಡ. ಯಾರನ್ನು ಹೇಗೆ ನೋಡಿಕೊಳ್ಳಬೇಕೂಂತ ನನಗೆ ಗೊತ್ತಿದೆ'.

'ಅವರಿಗಿಂತ ದೊಡ್ಡವರು ನಿಮ್ಮ ಒಡಹುಟ್ಟಿದ ಅಣ್ಣ ಅಲ್ವಾ, ನೀವು ಅವರ ಕಾಲು ಎಷ್ಟು ಹಿಡ್ಡಿದ್ದೀರಿ?' ಸರಳಾ ಇಲ್ಲದ ವಿಷಯ ಹೇಳಿದ್ದಲ್ಲ. ಆ ಸತ್ಯ ರಾಘವನಿಗೆ ಸಹ್ಯವಾಗಲಿಲ್ಲ. ದುರು ದುರು ದೂರ್ವಾಸನಂತೆ ಮನೆಯಲ್ಲಿ ಜಗಳ ಮಾಡಿ ಅಣ್ಣನ ಮನೆಯಿಂದ ಹೊರಗೆ ಬಂದು ತಪ್ಪು ಮಾಡಿದ್ದೇನೆನ್ನುವ ಅಪರಾಧಿಭಾವ ಅವನನ್ನು ಕಾಡುತ್ತಲೇ ಇದೆ. ಆದರೆ ಅದಕ್ಕೆ ಅವನು ದ್ವೇಷ ಸಾಧನೆಗೆ ಮುಂದಾಗಿದ್ದೇ ಅಹಂಕಾರ ಅಣ್ಣನನ್ನು ಹಿರಿಯನೆಂದು ಒಪ್ಪಿಕೊಳ್ಳದಂತೆ ಮಾಡಿಬಿಟ್ಟಿದೆ.

'ಅವನಾ? ಅವನೇ ನನ್ನನ್ನು ಮನೆಯಿಂದ ಹೊರಗೆ ಹಾಕಿದ್ದಲ್ವಾ? ಅವನ ಕಾಲು ಹಿಡಿಯಲಿಕ್ಕೆ ಅವನತ್ರ ಹಣ ಉಂಟಾ? ಇದ್ರೂ ನಮಗೆ ಸಿಗ್ತದಾ? ಅವನು ರೋಗ ಹಿಡಿದು ಮಲಗಿದ್ದಲ್ವಾ? ಅವನ ಸೇವೆ ಮಾಡ್ಲಿಕ್ಕೆ ಆಗುವುದಿಲ್ಲಾಂತ ಬಂದದ್ದಲ್ವಾ? ಅವನ ವಿಷಯ ಮಾತಾಡಬೇಡ. ಅದೆಲ್ಲಾ ಮುಗಿದ ಕತೆ'.

'ಎಂತ ಮುಗಿದ ಕತೆ. ನೀವು ಹುಂಬನ ಹಾಗೆ ಆ ನವೀನನ ಮಾತು ಕೇಳಿ ನಿಮ್ಮ ತಂಗಿಗೆ ಮೋಸ ಮಾಡಿದ್ದಲ್ವಾ? ಆ ನವೀನನೇ ನನ್ನ ಅಮ್ಮ ನಿಮಗೆ ತೆಗೆಸಿಕೊಟ್ಟ ಜಾಗಕ್ಕೆ ನೋಕಲೆ ಹಾಕಿದ್ದಲ್ವಾ? ನೆನಪುಂಟ ನಿಮಗೆ, ಆ ದಿನ ರಿಜಿಸ್ಟ್ರೇಶನ್‌ಗೆ ಎಂಬತ್ತು ಸಾವಿರ ಬೇಕೂಂತ ಹೇಳಿದ್ದಕ್ಕೆ ಆ ಜಾಗೆಯನ್ನು ನನ್ನ ಹೆಸರಿಗೆ ಮಾಡಿದ್ರೆ ದುಡ್ಡು ಕೊಡ್ತೇನೇಂತ ಹೇಳಿಲ್ವಾ? ಎಲ್ಲಾ ಅಷ್ಟೇ... ನಾವುಂಟು ನಮ್ಮ ತಲೆಯುಂಟು ಕೈಯುಂಟು. ನಮ್ಮನ್ನು ಎಂತಾಂತ ತಿಳಿದುಕೊಂಡಿದ್ದಾರೆ. ಸುಮ್ಮನೆ ಬಿಡಬೇಡಿ ಅವರನ್ನೆಲ್ಲ. ಯಾವಾಗ ಅವಕಾಶ ಸಿಕ್ಕದಾ ಆವಾಗ ಅವರಿಗೆ ಗೊತ್ತಾಗದ ಹಾಗೆ ದುಡ್ಡು ತೆಗೆದುಕೊಳ್ಳಬೇಕು. ಬಿಟ್ಟಿ ಚಾಕರಿ ಮಾಡುವುದು ಬೇಡ'.

ಸರಳಾಳ ಬೋಧನೆಗೆ ರಾಘವನ ತಲೆ ಗಿರ್ರೆಂದಿತು.

'ನೀನೀಗ ನನ್ನನ್ನು ಎಂತ ಮಾಡಬೇಕೂಂತ ಹೇಳುವುದು?'

'ಎಂತ ಬೇಕಾದರೂ ಮಾಡಿ. ನೀವು ತೇಜಣ್ಣ ಆಗಲಿ ಅವರ ತಮ್ಮ ನವೀನನಾಗಲಿ ಊರಿಗೆ ಬಂದಾಗ ಸುಮ್ಮನೆ ಬಿಡಬೇಡಿ. ಅವರತ್ರ ಎಷ್ಟು ತೆಗೆದುಕೊಳ್ಳಲಿಕ್ಕೆ ಸಾಧ್ಯ ಉಂಟಾ ಅಷ್ಟು ಹಣ ತೆಗೆದುಕೊಳ್ಳಿ'.

'ಅಂದ್ರೆ, ನಾನು ಅವರತ್ರ ಭಿಕ್ಷೆ ಬೇಡಬೇಕಾ?'

'ಭಿಕ್ಷೆಯಾ? ಭಿಕ್ಷೆ ಬೇಡುವುದು ಬೇಡ. ನೀವು ಮಾಡಿಕೊಟ್ಟ ಚಾಕರಿಗೆ ಸರಿಯಾಗಿ ದುಡ್ಡು ತೆಗೆದುಕೊಳ್ಳೀಂತ ಹೇಳುವುದು. ಯಾರು ಯಾರತ್ರನೋ ಸುಮ್ನೆ ಇನ್ನು ದುಡ್ಡು ತೆಗೆದುಕೊಳ್ಳುವುದಕ್ಕಿಂತ ಇದು ಎಷ್ಟೋ ವಾಸಿ. ಇವತ್ತು ಅಲ್ಲಿಗೆ ನಾಳೆ ಇಲ್ಲಿಗೆಂತ ಸುಮ್ಮನೆ ಅವರ ಹಿಂದೆ ಅಲೆಯುವುದೂ ಬೇಡ. ನಿಮಗೆ ಇನ್ನು ಪ್ರಾಯ ಬರುವುದಾ?'

'ನಾನು ಯಾರತ್ರ ದುಡ್ಡು ತೆಗೆದುಕೊಂಡಿದ್ದೇನೆ. ನಾನೇನು ಭಿಕ್ಷುಕ ಅಂದುಕೊಡಿದ್ದೀಯಾ ಕೈ ಒಡ್ಡಲಿಕ್ಕೆ? ನನಗೆ ಬರುವ ದುಡ್ಡು ಬಂದ್ರೆ ಸಾಕು. ಯಾರ ಹಂಗಿನಲ್ಲೂ ನಾನಿಲ್ಲ. ನನಗೆ ಊರಿನವರ ಚಾಕರಿ ಮಾಡಿದರೆ ಕೈ ತುಂಬಾ ದುಡ್ಡು ಸಿಗ್ತದೆ. ನನ್ನ ಸ್ವಾಭಿಮಾನವನ್ನು ನಾನು ಬಿಟ್ಟುಕೊಡುವುದಿಲ್ಲ'.

'ನೀವುಯಾರತ್ರನೂದುಡ್ಡುತೆಗೆದುಕೊಂಡಿಲ್ವಾ? ನಾವು ಜಾಗ ತೆಗೆದುಕೊಳ್ಳುವಾಗ ದುಡ್ಡು ಕೊಟ್ಟದ್ದು ಯಾರು? ನನ್ನ ಅಮ್ಮ ಅಲ್ವಾ? ನೀವು ಬಿಸಿನೆಸ್‌ಂತ ಹೇಳುವಾಗ ನನ್ನ ಅಮ್ಮನತ್ರ ಕೇಳಲಿಲ್ವಾ? ಅಮ್ಮ ದುಡ್ಡು ಕೊಟ್ಟದ್ದಕ್ಕೆ ನನ್ನಕ್ಕ ನಿಮ್ಮನ್ನು ಹಂಗಿಸಿದ್ದಲ್ವಾ? ಮರೆತು ಬಿಟ್ರಾ? ಆಗ ನಿಮ್ಮ ಸ್ವಾಭಿಮಾನ ಎಲ್ಲಿ ಹೋಗಿತ್ತು? ಅಷ್ಟು ಮಾತ್ರನಾ ನಿಮ್ಮ ಅಣ್ಣ ತಂಗಿಯರೇ ನಿಮ್ಮನ್ನು 'ಕಳ್ಳ' ಅಂತ ಕರೆದು ಬಿಟ್ರಲ್ಲಾ? ಅವರದ್ದೆಂತ ಗಂಟು ನೀವು ಕದ್ದದ್ದಕ್ಕೆ ಅವರು ಹಾಗೆ ಹೇಳಿದ್ರು? ಇದೆಲ್ಲಾ ಬೇಕಿತ್ತಾ ನಿಮಗೆ... ಸ್ವಲ್ಪ ನೀವು ನಿಯತ್ತಿನಿಂದ ಕಷ್ಟ ಬಿಟ್ಟು ಕೆಲಸ ಮಾಡುತ್ತಿದ್ದರೆ ನಿಮಗೆ ಭಿಕ್ಷುಕಾಂತ ಆಗಲಿ ಕಳ್ಳಾಂತ ಆಗಲಿ ಆರೋಪ ಬರುತ್ತಿತ್ತಾ? ನಿಮಗೆ ಬುದ್ಧಿ ಕಡಿಮೆ. ಈಗ ನೀವು ದೊಡ್ಡ ಜನಾಂತ ಮಾಡಲಿಕ್ಕೆ ಹೋದರೆ ಸಂಬಂಧಿಕರಲ್ಲ ಊರಿನವರುಸ ನಿಮ್ಮನ್ನು ಹಿಂದಿನಿಂದ ತಮಾಷೆ ಮಾಡದೆ ಕೂತುಕೊಳ್ಳುತ್ತಾರಾ?'

ಸರಳಾಳ ಮಾತುಗಳು ಚೇಣಿಯಿಂದ ಕಲ್ಲಿಗೆ ಬಿದ್ದ ಪೆಟ್ಟಿನಂತೆ ರಾಘವನ ಮನಸ್ಸಿಗೆ ಬಿತ್ತು. ತಾನು ಮಾಡಿದ ತಪ್ಪಿಗೆ ಸರಿಯಾದ ಶಿಕ್ಷೆ ಅನುಭವಿಸುತ್ತಿದ್ದೇನೆಂದು ಅನಿಸಿದ್ದರೂ ಅಹಂಕಾರ, 'ಅಡಿಗೆ ಬಿದ್ದರೂ ಮೂಗು ಮಣ್ಣಾಗಲಿಲ್ಲ' ಎಂದೇ ಮುಂದುವರಿಯುತ್ತಿತ್ತು.